# ದಿನಂಪ್ರತಿ ಅಪರಾಧಗಳ ಮಾಹಿತಿ ದಿನಾಂಕ: 25-10-2022

## ನೂತನ ನಗರ ಪೊಲೀಸ್ ಠಾಣೆ ಅಪರಾಧ ಸಂಖ್ಯೆ 177/2022 ಕಲಂ 379 ಐಪಿಸಿ :-

ದಿನಾಂಕ 24/10/2022 ರಂದು 1000 ಗಂಟೆಗೆ ಫಿರ್ಯಾದುದಾರರಾದ ಮಹೇಶ ತಂದೆ ಶಾಂತಪ್ಪ ಬಿರಾದಾರ ವಯ:47 ವರ್ಷ ಜಾತಿ:ಲಿಂಗಾಯತ ಉ:ಬ್ರೀಮ್ಸ ಆಸ್ಪತ್ರೆಯಲ್ಲಿ ಜಿಲ್ಲಾ ಶಸ್ತç ಚಿಕಿತ್ಸಕರು ಸಾ/ಸಂಗಮ ತಾ:ಕಮಲನಗರ ಸಧ್ಯ ಅಗ್ರಿಕಲ್ಚರ ಕಾಲೋನಿ ಗುಂಪಾ ಬೀದರ. ರವರು ಒಬ್ಬ ಆರೋಪಿ ಹಾಗು ಆಮ್ಲಜನಕ ತಾಮ್ರದ ಪೈಪ ತುಕುಡಿಗಳು ಜೊತೆಗೆ ಠಾಣೆಗೆ ಹಾಜರಾಗಿ ಲಿಖಿತ ದೂರು ನೀಡಿದರ ಸಾರಾಂಶವೆನAದರೆ ದಿನಾಂಕ 24/10/2022 ರಂದು ಮುಂಜಾನೆ 0915 ಗಂಟೆಯ ಸಮಯಕ್ಕೆ ಇವರ ಸೆಕ್ಯೂರಿಟಿ ಸಿಬ್ಬಂದಿಯಾದ ಶ್ರೀ ಚೆನ್ನಬಸವ ಇವರು ಪೋನ ಮುಖಾಂತರ ತಿಳಿಸಿದೆನೆಂದರೆ ನಾನು ಆಸ್ಪತ್ರೆಯಲ್ಲಿ ಕರ್ತವ್ಯದಲ್ಲಿದ್ದು, ಆಸ್ಪತ್ರೆಯ ಒಳಗಡೆ ಹೋದಾಗ ಆಸ್ಪತ್ರೆಯ ಎಫ,ಎಂ ವಾರ್ಡದಲ್ಲಿ ಏನೊ ಸಪ್ಪಳ ಕೇಳಿಸಿದ್ದು, ಅಲ್ಲಿಗ್ಗೆ ಹೋಗಿ ನೋಡಿದಾಗ ಎಫ,ಎಮ ವಾರ್ಡದಲ್ಲಿ ಒಬ್ಬ ಮನುಷ ಆಸ್ಪತ್ರೆಯಲ್ಲಿ ಅಳವಡಿಸಿದ ಆಮ್ಲಜನಕದ ತಾಮ್ರದ ಪೈಪಗಳು ತುಕುಡಿ ತುಕುಡಿ ಮಾಡಿ ಒಂದು ಚೀಲದಲ್ಲಿ ಹಾಕಿಕೊಂಡು ಹೋಗುವಾಗ ಅವನಿಗೆ ಬೆನ್ನಟಿ ಹಿಡಿದಿರುತ್ತೇನೆ ಅಂತಾ ತಿಳಿಸಿದ ಕೂಡಲೆ ಅಲ್ಲಿಗೆ ಬಂದು ನೋಡಲಾಗಿ ಆಸ್ಪತ್ರೆಯ ಎಫ,ಎಮ, ವಾರ್ಡದಲ್ಲಿ ಅಳವಡಿಸಿದ ಆಮ್ಲಜನಕದ ತಾಮ್ರದ ಪೈಪಗಳು ಕಟ್ಟ ಮಾಡಿದ್ದು ಇದ್ದು ಅವುಗಳ ಅ.ಕಿ.15,000/- ರೂ.ಇರುತ್ತದೆ. ನಂತರ ಅವನನ್ನು ಆಸ್ಪತ್ರೆಯ ಸಿಬ್ಬಂದಿಯವರಾದ ಚೆನ್ನಸವ ಮತ್ತು ಶ್ರೀ. ಶಿವಕುಮಾರ ಇಬ್ಬರು ಕೂಡಿಕೊಂಡು ಅವನನ್ನು ಹಿಡಿದು ಅವನ ಹೆಸರು ವಿಚಾರಿಸಲಾಗಿ ಅವನು ತನ್ನ ಹೆಸರು ಮಹ್ಮದ ಜಮೀಲ ತಂದೆ ಗೋರೆಖಾನ ಸಾ:ಮಲ್ಕಾಪೂರ ಸದ್ಯ ಮುಲ್ತಾನಿ ಕಾಲೋನಿ ಬೀದರ. ಎಂದು ತಿಳಿಸಿದನು. ಆಸ್ಪತ್ರೆಯಲ್ಲಿ ಕಳವು ಮಾಡಿದ ಕಳ್ಳರ ವಿರುದ್ದ ಕಾನೂನು ಕ್ರಮ ಕೈಕೊಳ್ಳಲು ವಿನಂತಿ ಇರುತ್ತದೆ. ಅಂತಾ ನೀಡಿದ ದೂರಿನ ಮೇರೆಗೆ ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೋಳ್ಳಲಾಗಿದೆ.

## ಬಸವಕಲ್ಯಾಣ ಗ್ರಾಮೀಣ ಠಾಣೆ ಅಪರಾಧ ಸಂಖ್ಯೆ 126/2022 ಕಲಂ 279,337,338,304(ಎ) ಐಪಿಸಿ :-

ದಿನಾಂಕ 24/10/2022 ರಂದು 22;50 ಗಂಟೆಗೆ ಫಿರ್ಯಾದಿ ಶ್ರೀಮತಿ ಶಕುಂತಲಾ ಗಂಡ ಸಂಜುಕುಮಾರ ಗೋಣಿ ವಯ: 19 ವರ್ಷ ಜಾತಿ: ಎಸ,ಟಿ ಕೋಳಿ ಉ: ಮನೆಕೆಲಸ ಸಾ:ರಾಜೋಳ ರವರು ಠಾಣೆಗೆ ಹಾಜರಾಗಿ ಲಿಖಿತ ದೂರು ನೀಡಿದರ ಸಾರಾಂಶವೆನAದರೆ ದಿನಾಂಕ 24/10/2022 ರಂದು ಮುಂಜಾನೆ 10 ಗಂಟೆ ಸುಮಾರಿಗೆ ಫಿರ್ಯಾದಿ ಮತ್ತು ನನ್ನ ಗಂಡ ಸಂಜುಕುಮಾರ ಇಬ್ಬರು ಕೂಡಿ ಹಬ್ಬದ ಪ್ರಯುಕ್ತ ತವರು ಮನೆಯಾದ ನೀಲಕಂಠವಾಡಿ ಗ್ರಾಮಕ್ಕೆ ಮೋಟಾರ ಸೈಕಲ ನಂ ಕೆಎ-56 ಇ-8288 ನೆದ್ದರ ಮೇಲೆ ಕುಳಿತುಕೊಂಡು ನೀಲಕಂಠವಾಡಿ ಗ್ರಾಮಕ್ಕೆ ಮತ್ತು ಭೋಸಗಾ ಗ್ರಾಮಕ್ಕೆ ಹೋಗಿ ನನ್ನ ಸೋದರಸೊಸೆ ಶ್ರಧ್ದಾ ತಂದೆ ವಿಠಲ ವಯ: 8 ವರ್ಷ ಇವಳಿಗೆ ಕರೆದುಕೊಂಡು ಮೂವರು ಕೂಡಿಕೊಂಡು ಮರಳಿ ರಾಜೋಳಗೆ ಅದೇ ಮೋಟಾರ ಸೈಕಲ ನಂ ಕೆಎ-56 ಇ-8288 ನೆದ್ದರ ಮೇಲೆ ನಾರಾಯಣಪೂರ ರಾಜೋಳ ಮಾರ್ಗವಾಗಿ ಹೋಗುವಾಗ ಶ್ರಧ್ದಾ ಇವಳು ನನ್ನ ಗಂಡನ ಮುಂದೆ ಕುಳಿತಿದ್ದಳು 7 ಪಿ.ಎಂ ಗಂಟೆ ಸುಮಾರಿಗೆ ನಾವು ಹುಲಗುತ್ತಿ ಬಸ್ಸ ನಿಲ್ದಾಣದಿಂದ ಸ್ವಲ್ಪ ದೂರದಲ್ಲಿ ಹೋದಾಗ ಎದುರಿನಿಂದ ಒಂದು ಕಾರ ಬರುತಿತ್ತು ಆ ಕಾರಿನ ಹಿಂದಿನAದ ಒಂದು ಮೋಟಾರ ಸೈಕಲ ಸವಾರನು ತನ್ನ ಮೋಟಾರ ಸೈಕಲ ಅತಿವೇಗ ಹಾಗೂ ನಿಷ್ಕಾಳಜಿಯಿಂದ ಓಡಿಸಿಕೊಂಡು ಬಂದು ಇವರು ಕುಳಿತುಕೊಂಡು ಹೋಗುತಿದ್ದ ಮೋಟಾರ ಸೈಕಲಿಗೆ ಬಲವಾಗಿ ಡಿಕ್ಕಿ ಮಾಡಿದ್ದು ಸದರಿ ಘಟನೆಯಲ್ಲಿ ಶ್ರಧ್ದಾ ಇವಳಿಗೆ ಬಲಕಣ್ಣಿನ ಕೇಳಗೆ ಭಾರಿಗಾಯ, ಹಣೆಗೆ ಗಾಯ, ಎಡಭುಜದಲ್ಲಿ ಭಾರಿ ಗುಪ್ತಗಾಯಗಳು ಆಗಿದ್ದವು ಗಂಡ ಸಂಜುಕುಮಾರ ಇವರಿಗೆ ಬಲಗೈ ಮುಂಗೈ ಹತ್ತಿರ ಭಾರಿಗಾಯವಾಗಿ ಕೈ ಮುರಿದಿರುತ್ತದೆ, ಬಲಗೈ ಭುಜದಲ್ಲಿ ತರಚಿದ ಗಾಯ ಆಗಿದ್ದು ನನಗೆ ಎಡಮೋಳಕಾಲಿಗೆ ತರಚೀದ ಗಾಯ ಆಗಿರುತ್ತದೆ ನಂತರ ಎದುರುನಿಂದ ಬಂದು ಡಿಕ್ಕಿ ಮಾಡಿದ ಮೋಟಾರ ಸೈಕಲ ನಂಬರ ನೋಡಲಾಗಿ ಅದರ ನಂಬರ ಕೆಎ-38 ಎಸ್-2911 ಇದ್ದು ಮೋಟಾರ ಸೈಕಲ ಸವಾರಿನಿಗೆ ವಿಚಾರಣೆ ಮಾಡಲು ತನ್ನ ಹೆಸರು ವಿಷ್ಣು ತಂದೆ ಶ್ರೀನಿವಾಸ ಅಂತಾ ತಿಳಿಸಿದನು ಆತನಿಗೆ ತಲೆಯಲ್ಲಿ, ಗಟಾಯಿಗೆ ರಕ್ತಗಾಯವಾಗಿ ಕೀವಿಯಿಂದ ರಕ್ತಶ್ರಾವ ಆಗುತಿದ್ದು ಹಿಂದೆ ಕುಳಿತವರಿಗೆ ವಿಚಾರಿಸಲು ತಮ್ಮ ಹೆಸರು ವಿಲಾಸ ತಂದೆ ಸಂಜುಕುಮಾರ ಗೊಡಬೋಲೆ ಅಂತಾ ತಿಳಿಸಿದ್ದು ಆತನಿಗೆ ಹಣೆಯಲ್ಲಿ, ತಲೆಯಲ್ಲಿ ರಕ್ತಗಾಯ ಆಗಿದ್ದವು ಮತ್ತೊಬ್ಬನು ಲಕ್ಷö್ಮಣ ತಂದೆ ತಂದೆ ಕಲ್ಲಪ್ಪಾ ಮೇತ್ರೆ ಸಾ:ಮೂವರು ಘಾಟಬೋರಾಳ ಗ್ರಾಮ ಅಂತಾ ತಿಳಿಸಿದ್ದು ಆತನಿಗೆ ಬಲಗಾಲ ತೊಡೆಯಲ್ಲಿ, ಗುಪ್ತಗಾಯ ಆಗಿರುವದರಿಂದ ರೋಡಿನ ಮೇಲೆ ಜಮಾಯಿಸಿದ ಸಾರ್ವಜನಿಕರಲ್ಲಿ ಯಾರೋ ಒಬ್ಬರು ಅಂಬುಲೇನ್ಸಗೆ ಫೋನ ಮಾಡಿ ಕರೆಯಿಸಿದಾಗ ಅದರಲ್ಲಿ ಕುಳಿತು ಇಲಾಜು ಕುರಿತು ಬಸವಕಲ್ಯಾಣ ಸರ್ಕಾರಿ ಆಸ್ಪತ್ರೆಗೆ ಬಂದು ಪ್ರಥಮ ಉಪಚಾರ ಪಡೆಯುವಾಗ ವೈದ್ಯಾಧಿಕಾರಿಗಳು ನೋಡಿ ಶ್ರಧ್ದಾ ಇವಳಿಗೆ ಹೆಚ್ಚಿನ ಇಲಾಜು ಕುರಿತು ಕಲಬುರ್ಗಿಗೆ ತೆಗೆದುಕೊಂಡು ಹೋಗಿ ಅಂತಾ ತಿಳಿಸಿದಾಗ 10 ಗಂಟೆಗೆ ಕಲಬುರ್ಗಿಯ ಅಶ್ವಿನಿ ಆಸ್ಪತ್ರೆಗೆ ಹೋದಾಗ ಶ್ರಧ್ದಾ ಮೃತಪಟ್ಟಿರುತ್ತಾಳೆ. ಅಂತಾ ನೀಡಿದ ದೂರಿನ ಮೇರೆಗೆ ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೋಳ್ಳಲಾಗಿದೆ.